**9ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**
**ಸಿ.ಸಿ. ನಂ. 12071/2022**

ಪಿಡಬ್ಲ್ಯೂ: 1 ಸಿಡಬ್ಲ್ಯೂ: 1

| | |
|---|---|
| ಸಾಕ್ಷಿದಾರನ ಹೆಸರು | ರವಿ ನಂದನ |
| ತಂದೆಯ ಹೆಸರು | ಲೇ ಗೋವಿಂದಯ್ಯ |
| ವಯಸ್ಸು | 37 ವರ್ಷ |
| ಕೆಲಸ | ಮೀಡಿಯಾ ರಿಪೋರ್ಟರ್ |
| ವಾಸ | ಬೇಗೂರು, ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ: 26.07.2024ರಂದು ಕರೆ ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ನಾನು ಡಿಸೆಂಬರ್ 2020 ರಿಂದ ಒಂದು ವರ್ಷದ ಕಾಲ ಆರೋಪಿಯ ಮನೆಯಲ್ಲಿ ಭೋಗ್ಯಕ್ಕೆ ವಾಸವಿದ್ದೆವು. ದಿನಾಂಕ 03.11.2021 ರಂದು ನಾನು ರಾಜಾಜಿನಗರಕ್ಕೆ ಕೆಲಸಕ್ಕೆ ಹೋಗಿದ್ದೆನು. ಮಧ್ಯಾಹ್ನ 11.30ರ ಸುಮಾರಿಗೆ ನಮ್ಮ ಮನೆಯಿಂದ ಮನೆಗೆ ವಿದ್ಯುತ್ ಮತ್ತು ನೀರು ಬರುತ್ತಿಲ್ಲವೆಂದು ನನಗೆ ಕರೆ ಬಂದಿರುತ್ತದೆ. ನಾನು ಅಪಾರ್ಟ್ ಮೆಂಟ್ ನ ಭದ್ರತಾ ಸಿಬ್ಬಂದಿಗೆ ಕರೆ ಮಾಡಿದಾಗ ವಿದ್ಯುತ್ ಸಮಸ್ಯೆ ಇದ್ದು ಬೆಸ್ಕಾಂನವರು ಬರುತ್ತಿದ್ದಾರೆ ಎಂದು ತಿಳಿಸಿದರು. ಪುನಃ ನಾನು ಕರೆ ಮಾಡಿದಾಗ ಬೆಸ್ಕಾಂ ನ ಸಮಸ್ಯೆ ಇರುವುದಿಲ್ಲ, ಅಪಾರ್ಟ್ ಮೆಂಟ್ ನಲ್ಲೇ ಸಮಸ್ಯೆ ಇರುತ್ತದೆ ಎಂದು ಹೇಳಿದರು. ರೂ.5,000/- ಹಣ ಕೊಟ್ಟರೆ ರಿಪೇರಿ ಮಾಡಿಕೊಡುತ್ತಾರೆ ಎಂದು ಭದ್ರತಾ ಸಿಬ್ಬಂದಿ ಹೇಳಿದರು. ನಂತರ ನಾನು ಸದರಿ ವಿಚಾರವನ್ನು ಸಂಜೆ 7.30ಕ್ಕೆ ಕಚೇರಿಯಿಂದ ನನ್ನ ಮೊಬೈಲ್ ಸಂಖ್ಯೆ 9632371733 ರಂದ ಆರೋಪಿಯ ಮೊಬೈಲ್ ಸಂಖ್ಯೆ 96866753555 ಗೆ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿದೆನು. ಆಗ ಆರೋಪಿಯು ಏ ಲೋಫರ್ ಕುಡಿದುಬಿಟ್ಟು ಮಾತನಾಡುತ್ತಿದ್ದೀಯಾ ನೀನು ಯಾರು ನನಗೆ ಪೋನ್ ಮಾಡಲು ಎಂದು ಹೇಳಿದರು. ಆಗ ನಾನು ನೀವು ಮನೆಯ ಮಾಲೀಕರಿದ್ದು ನಿಮಗೆ ಹೇಳುತ್ತಿದ್ದೇನೆ ಎಂದು ಹೇಳಿದಾಗ ಇದೆಲ್ಲಾ ನನ್ನ ಬಳಿ

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf

ಇಟ್ಟುಕೊಳ್ಳಬೇಡ ಬೇಕಿದ್ದರೆ ಮಾಡಿಸಿಕೋ ಇಲ್ಲದಿದ್ದರೆ ಬಿಡು ಎಂದು ಹೇಳಿರುತ್ತಾರೆ. ಸದರಿ ಮನೆಯಲ್ಲಿ ಮೊದಲಿನಿಂದಲೂ ವಿದ್ಯುತ್ ಮತ್ತು ಕುಡಿಯುವ ನೀರಿನ ಸಮಸ್ಯೆ ಇದ್ದು ನಾನು ಆರೋಪಿಗೆ ಮನೆಯನ್ನು ಖಾಲಿ ಮಾಡುತ್ತೇನೆ ಎಂದು ಹೇಳುತ್ತಿದ್ದೆನು. ಆಗ ಆರೋಪಿಯು ಬೇರೆ ಜನ ಮಾಡಿ ಖಾಲಿ ಮಾಡು ಎಂದು ಹೇಳಿದರು. ನಾನು ಮನೆಯ ಮೂಲಭೂತ ಸೌಲಭ್ಯಗಳನ್ನು ಕೇಳಿದಾಗ ಆರೋಪಿಯು ನನಗೆ ಧಮ್ಕಿ ಹಾಕುತ್ತಿದ್ದರು. ಮನೆಯನ್ನು ಹೇಗೆ ಖಾಲಿ ಮಾಡಿಸಬೇಕು ಎಂದು ನನಗೆ ಗೊತ್ತಿದೆ. ಇಷ್ಟ ಇದ್ದರೆ ಇರು ಇಲ್ಲದಿದ್ದರೆ ಖಾಲಿ ಮಾಡಿಕೊಂಡು ಹೋಗು ಎಂದು ನನ್ನ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ಬೇರೆ ಜನ ಮಾಡಿಕೊಡು ಇಲ್ಲದಿದ್ದರೆ ನಿನ್ನನ್ನು ಹೇಗೆ ಖಾಲಿ ಮಾಡಿಸಬೇಕು ಎಂದು ಗೊತ್ತು ಎಂದು ಜೀವ ಬೆದರಿಕೆ ಹಾಕಿದರು. ದಿನಾಂಕ 09.11.2021ರಂದು ನಾನು ಈ ಬಗ್ಗೆ ಬೇಗೂರು ಪೊಲೀಸರಿಗೆ ದೂರು ನೀಡಿದೆನು. ನಂತರ ಪೊಲೀಸರು ನನ್ನ ಮನೆಯ ಬಳಿ ಬಂದು ಮಹಜರ್ ಮಾಡಿದರು. ಸಾಕ್ಷಿ ತನಗೆ ತೋರಿಸಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ತನಗೆ ತೋರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೊಲೀಸರು ನನಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನಿಪಿ.3ರಂತೆ ನೋಟಿಸ್ ನಂತೆ ಸಂಬಂಧಪಟ್ಟ ದಾಖಲಾತಿಗಳನ್ನು ಪೊಲೀಸರಿಗೆ ಇ-ಮೇಲ್ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಜಿ ಎಲ್ ವಕೀಲರಿಂದಃ**

ನಾನು ಆರೋಪಿಯ ಮನೆಯಲ್ಲಿ ಭೋಗ್ಯಕ್ಕೆ ಇದ್ದೆನು ಎನ್ನುವ ಬಗ್ಗೆ ದಾಖಲಾತಿಯನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.11.2021ರಂದು ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ವೈಯಕ್ತಿಕ ಕೆಲಸಗಳು ಇದ್ದುದರಿಂದ ದೂರು ಕೊಡಲಾಗಲಿಲ್ಲವೆಂದು ನುಡಿಯುತ್ತಾರೆ. ನಾನು ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವುದರಿಂದ ದೂರು ಕೊಡಲು ಠಾಣೆಗೆ ಹೋಗಲು ಆಗಲಿಲ್ಲವೆಂದು ನುಡಿಯುತ್ತಾರೆ. ನಾನು

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf

03.11.2021ರಂದು ಬೆಳಿಗ್ಗೆ 9.30 ರಿಂದ ರಾತ್ರಿ 10.30-11.00 ಗಂಟೆಯವರೆಗೆ ಕೆಲಸ ಮಾಡಿದ್ದೆನು. ರಾತ್ರಿ 11.30 ಗಂಟೆಗೆ ಪೊ.ಠಾಣೆ ತೆರೆದಿರುತ್ತದೆ ಎಂದರೆ ಸರಿ. ನಾನು ಮನೆಯ್ಲಿ ವಿದ್ಯುತ್ ಮತ್ತು ನೀರು ಇಲ್ಲದೇ ಇದ್ದುದರಿಂದ ಪತ್ನಿ ಒಬ್ಬರೇ ಮನೆಯಲ್ಲಿದ್ದುದರಿಂದ ಮನೆಗೆ ಹೋಗಿರುತ್ತೇನೆ. ಮರುದಿವಸ ಠಾಣೆಗೆ ಹೋಗಿ ದೂರು ಕೊಡಲು ಸಾಧ್ಯವಾಗದೇ ಇದ್ದುದರಿಂದ ದೂರು ಕೊಡಲಿಲ್ಲ. ಮರು ದಿವಸ ಕೂಡ ಕಚೇರಿ ಕೆಲಸಕ್ಕೆ ಹೋಗಿದ್ದೆನು. ಸದರಿ ದಿನ ಕೂಡ ಬೆಳಿಗ್ಗೆ 9.00 ಗಂಟೆಗೆ ಹೋಗಿದ್ದೆನು. ಕೆಲಸಕ್ಕೆ ಹೋಗುವ ಪೂರ್ವದಲ್ಲಿ ಮನೆ ಕೆಲಸ ಇದ್ದುದರಿಂದ ಠಾಣೆಗೆ ಹೋಗಲಿಲ್ಲ. ದಿನಾಂಕ 09.11.2021ರವರೆಗೆ ಯಾವುದೇ ರಜೆ ಇರಲಿಲ್ಲ. ನಮಗೆ ಪ್ರತಿ ಭಾನುವಾರ ವಾರದ ರಜೆ ಇರುತ್ತದೆ. ನಾನು 09.11.2021ರಂದು ಠಾಣೆಗೆ ಹೋಗಿ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದೂರನ್ನು ಕೈಯಲ್ಲಿ ಬರೆಯಲು ತೊಂದರೆ ಇರಲಿಲ್ಲ. ದೂರನ್ನು ದಿನಾಂಕ 17.01.2022ರಂದು ಕೊಟ್ಟಿರುವಂತೆ ನಿಪಿ.1ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದೇ ಇರುವುದರಿಂದ 03.11.2021 ಅಥವಾ 09.11.2021ರಂದು ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಭೋಗ್ಯದ ಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಾರ್ಟ್ ಮೆಂಟ್ ನಲ್ಲಿ 26-27 ಮನೆಗಳಿವೆ. ನಾನು ಹೇಳಿದ ಸದರಿ ಜಮೀನಿನ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಾರ್ಟ್ ಮೆಂಟ್ ನಲ್ಲಿ ಲೋಕನಾಥ್ ಬಾಬು ನಾಯ್ಡು ರವರಿಗೆ ಸದರಿ ಪ್ಲಾಟ್ ಗಳಿವೆ ಎಂದರೆ ನನಗೆ ಗೊತ್ತಿಲ್ಲ. ಅಪಾರ್ಟ್ ಮೆಂಟ್ ಗಳಲ್ಲಿ ಮಾಲೀಕರ ಸಂಘ ಮಾಡುತ್ತಾರೆ ಎಂದರೆ ಸರಿ. ಈ ಅಪಾರ್ಟ್ ಮೆಂಟ್ ನಲ್ಲೂ ಕೂಡ ಮಾಲೀಕರ ಸಂಘ ಇರುತ್ತದೆ ಎಂದರೆ ಸರಿಯಲ್ಲ. ಅಪಾರ್ಟ್ ಮೆಂಟ್ ನಲ್ಲಿ ಯಾವುದೇ ಕುಂದು ಕೊರತೆ ಇದ್ದರೂ ಮಾಲೀಕರ ಸಂಘಕ್ಕೆ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು ಎಂದರೆ ಅಂತಹ ಯಾವುದೇ ಸಂಘ ಇರಲಿಲ್ಲ. ಸದರಿ ಅಪಾರ್ಟ್ ಮೆಂಟ್ ನ ಇತರೆ ವಾಸಿಗಳು ವಿದ್ಯುತ್ ಮತ್ತು ನೀರಿನ ಸಮಸ್ಯೆ ಬಗ್ಗೆ ಭದ್ರತಾ ಸಿಬ್ಬಂದಿಗೆ ಹೇಳಿರುತ್ತಾರ ಎಂದರೆ ಸಾಕ್ಷಿಯು ಕೆಲವರು ಹೇಳಿರುತ್ತಾರೆ, ಎಲ್ಲರು ಹೇಳಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ನಾನು ಮತ್ತು ನನ್ನ ಪತ್ನಿ ಇದ್ದೆವು ಬೇರೆ ಯಾರು ಇರಲಿಲ್ಲ. ಮಹಜರ್ ಮಾಡಲು ಪೊಲೀಸರು ಯಾವ ದಿನದಂದು ಸ್ಥಳಕ್ಕೆ ಬಂದರು ಎಂದು ನೆನಪಿಲ್ಲ. ಬೆಳಿಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದರು. ಆ ದಿನ ನನಗೆ ಮಹತ್ವದ ಕೆಲಸಗಳು

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf

ಇರಲಿಲ್ಲವಾ ಎಂದರೆ ಸಾಕ್ಷಿಯು ಪೊಲೀಸರು ಮೊದಲೇ ಹೇಳಿದ್ದರಿಂದ ನಾನು ಮನೆಯಲ್ಲಿಯೇ ಇದ್ದೆನು ಎಂದು ನುಡಿಯುತ್ತಾರೆ. ಚಾಸಾ.3 ನನ್ನ ಸಂಬಂಧಿಕರು. ಪೊಲೀಸರು ಮನೆಯ ಬಳಿ ಬಂದಾಗ ಉಳಿದ ಅಪಾರ್ಟ್ ಮೆಂಟ್ ನ ವಾಸಿಗಳು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಾನು ಸದರಿ ದಿನ 1 ಗಂಟೆಯ ಕಾಲ ಮನೆಯಲ್ಲಿದ್ದೆನು. ಪೊಲೀಸರು ಆ ದಿನ ಲ್ಯಾಪ್ ಟಾಪ್ ತೆಗೆದುಕೊಂಡು ಬಂದಿರಲಿಲ್ಲ. ಮಹಜರ್ ಗೆ ಸ್ಥಳದಲ್ಲಿ ಸಹಿ ಪಡೆದುಕೊಂಡರೋ ಅಥವಾ ಠಾಣೆಯಲ್ಲಿ ಸಹಿ ಪಡೆದುಕೊಂಡರೋ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ನಾನು ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ನೆನಪಿಲ್ಲ. ನಾನು ಪತ್ರಿಕಾ ವರದಿಗಾರ ಎಂದು ಪೊಲೀಸರನ್ನು ಹೆದರಿಸಿ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನೀರು ಮತ್ತು ವಿದ್ಯುತ್ ಸಂಪರ್ಕ ಸರಿ ಇಲ್ಲದೇ ಇದ್ದರೆ ಸಾಮಾನ್ಯವಾಗಿ ಮನೆಯನ್ನು ಪಡೆದುಕೊಳ್ಳುವುದಿಲ್ಲ ಎಂದರೆ ಮನೆಗೆ ಬಂದ ನಂತರ ಸದರಿ ಸಮಸ್ಯೆ ತಿಳಿಯಿತು ಎಂದು ನುಡಿಯುತ್ತಾರೆ. ನಾನು ಕೂಡ ಬೆಸ್ಕಾಂ ನ ಸಹಾಯವಾಣಿಗೆ ಕರೆ ಮಾಡಿ ದೂರು ತಿಳಿಸಿದ್ದೇನೆ ಎಂದು ನನ್ನ ದೂರಿನಲ್ಲಿ ಹೇಳಿದ್ದೇನೆ. ಬೆಸ್ಕಾಂಗೆ ದೂರು ನೀಡಿದರೆ ದೂರು ಸಂಖ್ಯೆಯನ್ನು ನೀಡುತ್ತಾರೆ ಎಂದರೆ ಸರಿ. ದೂರಿನಲ್ಲಿ ಬೆಸ್ಕಾಂ ನವರು ನೀಡಿದ ದೂರು ಸಂಖ್ಯೆಯನ್ನು ನಮೂದಿಸಲು ತೊಂದರೆ ಇರಲಿಲ್ಲ. ದಿನಾಂಕ 03.11.2021ರಂದು ಸದರಿ ಕಟ್ಟಡದಲ್ಲಿ ಯಾವುದೇ ನೀರು ಮತ್ತು ವಿದ್ಯುತ್ ಸಮಸ್ಯೆ ಇರಲಿಲ್ಲ ಎಂದರೆ ಸರಿಯಲ್ಲ. ಆದುದರಿಂದ ನಾನು ಬೆಸ್ಕಾಂ ನವರಿಗೆ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಏ ಲೋಫರ್ ಕುಡಿದುಬಿಟ್ಟು ಮಾತನಾಡುತ್ತಿದ್ದೀಯಾ ನೀನು ಯಾರು ನನಗೆ ಫೋನ್ ಮಾಡಲು ಎಂದು ಹೇಳಿದರು ಎಂದು ಹೇಳಿರುತ್ತೇನೆ. ಇದೆಲ್ಲಾ ನನ್ನ ಬಳಿ ಇಟ್ಟುಕೊಳ್ಳಬೇಡ ಬೇಕಿದ್ದರೆ ಮಾಡಿಸಿಕೋ ಇಲ್ಲದಿದ್ದರೆ ಬಿಡು ಎಂದು ಹೇಳಿರುತ್ತಾರೆ ಎಂಬ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ನೆನಪಿಲ್ಲ. ಸದರಿ ಮನೆಯಲ್ಲಿ ಮೊದಲಿನಿಂದಲೂ ವಿದ್ಯುತ್ ಮತ್ತು ಕುಡಿಯುವ ನೀರಿನ ಸಮಸ್ಯೆ ಇದ್ದು ನಾನು ಆರೋಪಿಗೆ ಮನೆಯನ್ನು ಖಾಲಿ ಮಾಡುತ್ತೇನೆ ಎಂದು ಹೇಳುತ್ತಿದ್ದೆನು ಎಂಬ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವತ್ತೂ ಕರೆ ಮಾಡಿ ನೀರು ಮತ್ತು ವಿದ್ಯುತ್ ಸಮಸ್ಯೆ ಇರುವ ಬಗ್ಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಅಪಾರ್ಟ್ ಮೆಂಟ್ ನ ಉಸ್ತುವಾರಿಯನ್ನು ಅಶ್ವಥ್ ರೆಡ್ಡಿ ಎಂಬ

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf

www.ecourtsindia.com

ಮ್ಯಾನೇಜರ್ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಮನೆಗೆ ಬಂದಾಗ ಭದ್ರತಾ ಸಿಬ್ಬಂದಿಯನ್ನು ವಿಚಾರಿಸಿದರು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವೆರದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ.

9ನೇ ಅ. ಮು. ನ್ಯಾ. ದಂ.

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf

www.ecourtsindia.com

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ.

9ನೇ ಅ. ಮು. ನ್ಯಾ. ದಂ.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABC030314522022/truecopy/order-2.pdf